೩. ಸಧ್ಯದಲ್ಲಿ ಹರಿಜನ, ಗಿರಿಜನ ನಿರುದ್ಯೋಗಿ ಮೆಟ್ರಿಕ್ಯೂಲೇಟ್‌ನವರಿಗೆ ಸಿ ಮತ್ತು ಡಿ ಜಾಗ ವರ್ಷ ೧ಕ್ಕೆ ೧ ಹೆಕ್ಟೇರ್‌ನಂತೆ ೭ ವರ್ಷ ಕೊಟ್ಟು ಅರಣ್ಯ ಬೆಳೆಸುವ ಯೋಜನೆ ಜಾರಿ ಇದೆ.

೪. ರಾಜ್ಯ ಸರ್ಕಾರದ ಆದೇಶವನ್ನು ನಿರೀಕ್ಷಿಸಿ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿಜಿಲ್ಲೆಗೆ ತಲಾ ೧೦ ರಂತೆ ಫಲಾನುಭವಿಗಳನ್ನು ಗುರುತಿಸಿ ಪ್ರತಿ ಫಲಾನುಭವಿಗೆ ಪ್ರತಿ ವರ್ಷಕ್ಕೆ ೧ ಹೆಕ್ಟೇರ್‌ನಂತೆ ೭ ವರ್ಷಗಳವರೆಗೆ ನೆಡುತೋಪುಗಳನ್ನು ಬೆಳೆಸಲು ಆದೇಶವನ್ನು ಕೊಡಲಾಗಿದೆ. ಅಲ್ಲದೆ ಈ ದಿಸೆಯಲ್ಲಿ ನೆಡುತೋಪುಗಳನ್ನು ಬೆಳೆಸಲು ರಾಜ್ಯದ ಎಲ್ಲಿಡೆಯಲ್ಲಿಯೂ ಕ್ರಮ ತೆಗೆದುಕೊಳ್ಳಲಾಗಿದೆ. ಇದಲ್ಲದೆ ವಿಶೇಷ ಘಟಕ ಯೋಜನಾನ್ವಯ ಫಲಾನುಭವಿಯನ್ನು (ಹರಿಜನ) ಗುರುತಿಸಿ ಪ್ರತಿಫಲಾನುಭವಿಗೂ ½ ಹೆಕ್ಟೇರ್‌ನಂತೆ ಪ್ರತಿ ವರ್ಷ 'ಸಿ' ಮತ್ತು 'ಡಿ' ವರ್ಗದ ಜಮೀನಿನಗಳನ್ನು ೭ ವರ್ಷಗಳವರೆಗೆ ಕೊಟ್ಟು ಸಾಮಾಜಿಕ ಭದ್ರತಾ ನೆಡುತೋಪುಗಳನ್ನು ಬೆಳೆಸಲಾಗುತ್ತಿದೆ. ಒಟ್ಟು ರಾಜ್ಯದಲ್ಲಿ ೧೯೮೬-೮೭ನೇ ಸಾಲಿನಲ್ಲಿ ೮೨೦೦ ಫಲಾನುಭವಿಗಳನ್ನು ಗುರುತಿಸಿ ಈ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲಾಗುತ್ತದೆ. ಪ್ರಾರಂಭದಲ್ಲಿ ನೆಡುತೋಪುಗಳನ್ನು ಬೆಳೆಸುವುದು ಮತ್ತು ಅವುಗಳನ್ನು ಪೋಷಿಸುವ ಕೆಲಸಗಳನ್ನು ಇಲಾಖೆಯು ವಹಿಸಿಕೊಳ್ಳುತ್ತದೆ.

ಸರ್ಕಾರವು ಬೇಳೂ 'ಸಿ' ಮತ್ತು 'ಡಿ' ವರ್ಗದ ಜಮೀನುಗಳಲ್ಲಿ, ಭೂರಹಿತ, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರಿಗೆ ಅಲ್ಲದೆ ನಿರುದ್ಯೋಗಿ ವಿದ್ಯಾವಂತರಿಗೆ, ಹರಿಜನರಿಗೆ ಮತ್ತು ಗಿರಿಜನರಿಗೆ ತಲಾ ೧ ಹೆಕ್ಟೇರ್ ನಂತರ ೭ವರ್ಷಗಳವರೆಗೆ ನೆಡುತೋಪುಗಳನ್ನು ಬೆಳೆಸಲು ಸಹಕಾರ ಭೂ ಅಭಿವೃದ್ಧಿ ಬ್ಯಾಂಕಿನ ನೆರವನ್ನು ಪಡೆಯುವ ಯೋಜನೆಯನ್ನು ಹಾಕಿಕೊಂಡಿರುತ್ತದೆ. ಮೊದಲನೆಯದಾಗಿ ಇವರುಗಳಿಗೆ ೧೫ ವರ್ಷಗಳವರೆಗೆ ಗುತ್ತಿಗೆಯನ್ನು ಕೊಡಲಾಗುವುದು ನಂತರ ೩೦ ವರ್ಷಗಳವರೆಗೆ ನವೀಕರಿಸಲಾಗುವುದು.

ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರಕಟಣೆ

ಅಧ್ಯಕ್ಷರು.— ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧ನೇ ನಿಯಮದ ಮೇರೆಗೆ ದಿನಾಂಕ ೨೭ನೇ ಆಗಸ್ಟ್, ೧೯೮೬ರಂದು ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕಾರವಾದ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟದ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, ೧೯೮೬ನ್ನು ಈ ಮೂಲಕ ಕಳುಹಿಸುತ್ತಿದ್ದೇನೆ."

ವರದಿಗಳನ್ನೊಪ್ಪಿಸುವುದು

ಶ್ರೀ ಎಂ. ವೀರಪ್ಪ ಮೊಯ್ಲಿ.— ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ೧೯೮೦-೮೧ ರಿಂದ ೧೯೮೩-೮೪ನೇ ಸಾಲುಗಳ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಗಳ ಹಾಗೂ ಭಾರತದ ನಿಯಂತ್ರಿಕ ಮಹಾ ಲೆಖಾ ಪರೀಕ್ಷಕರ ಮೇಲ್ಕಂಡ ಸಾಲುಗಳ (ಸಿವಿಲ್ ಮತ್ತು ರಾಜಸ್ವ) ವರದಿಗಳ ಆಧಾರದ ಮೇರೆಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಹದಿವೂರನೆ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

ಹಾಗೂ

ಆಡಳಿತ ಸುಧಾರಣಾ ಮತ್ತು ಸಿಬ್ಬಂದಿ ಇಲಾಖೆಗೆ ಸಂಬಂಧಿಸಿದಂತೆ ಭಾರತದ ನಿಯಂತ್ರಿಕ ಮಹಾಲೇಖಾ ಪರೀಕ್ಷಕರ ವರದಿ ೧೯೮೨-೮೩ ಮತ್ತು ೧೯೮೩-೮೪ರಲ್ಲಿ ನಮೂದಿಸಿರುವ ಸರಕಾರದ ಹಣ ದುರುಪಯೋಗಪಡಿಸಿರುವ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಹದಿನಾಲ್ಕನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.— ಗುಲ್ಬರ್ಗ ಹಾಗೂ ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಕರ್ನಾಟಕ ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯು ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.